MAY 25, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **'ಧರ್ತಿ ಆಬಾ, ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ';** ಪರಿಶಿಷ್ಟ ಸಮುದಾಯಗಳ, ಶ್ರೇಯೋಭಿವೃದ್ಧಿ ಆಂದೋಲನ, ಇಂದು ಸಮಾರೋಪ.
- **ಫಿಟ್ ಇಂಡಿಯಾ; ಸಂಡೇಸ್ ಆನ್ ಬೈಸಿಕಲ್** – ಧಾರವಾಡದಲ್ಲಿ, 75ನೇ ಆವೃತ್ತಿಯ ಸೈಕ್ಲೋಥಾನ್.
- **ಇಂದು, ಅಂತಾರಾಷ್ಟ್ರೀಯ, ಕಾಣೆಯಾದ** ಮಕ್ಕಳ, ಜ್ಞಾಪಕಾರ್ಥ ದಿನ.
- **ವಿಶ್ವ ಥೈರಾಯ್ಡ್ ಜಾಗೃತಿ,** ದಿನಾಚರಣೆ ಇಂದು.

<><><>

**ಈಗ ವಾರ್ತೆಗಳ ವಿವರ**

<><><>

**'ಧರ್ತಿ ಆಬಾ, ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ'ದಡಿ,** 'ಜನ್ ಭಾಗೀದಾರಿ; ಸಬ್ ಸೇ ದೂರ್, ಸಬ್ ಸೇ ಪೆಹಲೆ' ಧ್ಯೇಯದೊಂದಿಗೆ, ಕೇಂದ್ರ ಸರ್ಕಾರ, ರಾಜ್ಯಗಳ ಪರಿಶಿಷ್ಟ ಸಮುದಾಯಗಳ, ಶ್ರೇಯೋಭಿವೃದ್ಧಿಗಾಗಿ ಕೈಗೊಂಡ, ಜನ ಜಾಗೃತಿ ಹಾಗೂ ಫಲಾನುಭವಿಗಳ ಗುರುತಿಸುವಿಕೆ ಮತ್ತು ಒಳಗೊಳ್ಳುವಿಕೆ ಆಂದೋಲನ, ಇಂದು ಸಮಾರೋಪಗೊಳ್ಳಲಿದೆ.

<><><>

**ಈ ಕುರಿತು, ಒಂದು ವರದಿ..**

<><><>

***ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಹಿಂದುಳಿದ ಹಾಗೂ ಬುಡಕಟ್ಟು ಸಮುದಾಯದವರೇ ಹೆಚ್ಚಿರುವ, ರಾಜ್ಯದ ಮೈಸೂರು, ಕೊಡಗು, ಚಾಮರಾಜನಗರ, ಚಿತ್ರದುರ್ಗ ಹಾಗೂ ವಿಜಯನಗರ***

*ಜಿಲ್ಲೆಗಳಿಗೆ, ವಿಶೇಷ ಆದ್ಯತೆ ನೀಡಿ, ಎಲ್ಲ 31 ಜಿಲ್ಲೆಗಳಲ್ಲಿ, ಧರ್ತಿ ಆಬಾ, ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ, ಆಯೋಜಿಸಿದೆ. ಕೃಷಿ, ಪಶು ಸಂಗೋಪನೆ, ಶಿಕ್ಷಣ, ಆರೋಗ್ಯ ಸೇರಿದಂತೆ, ವಿವಿಧ ಇಲಾಖೆಗಳ ಸೌಲಭ್ಯಗಳು ಮತ್ತು ಜನಪರ ಯೋಜನೆಗಳನ್ನು, ಪರಿಶಿಷ್ಟ ವರ್ಗದ, ಅರ್ಹ ಫಲಾನುಭವಿಗಳ, ಮನೆಬಾಗಿಲಿಗೆ ತಲುಪಿಸಲು, ಈ ಅಭಿಯಾನ ಕೈಗೊಳ್ಳಲಾಗಿದೆ. ಪ್ರಧಾನಮಂತ್ರಿ ಜನ ಮನ ಹಾಗೂ ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ, ವಿಜಯನಗರ ಜಿಲ್ಲೆಯಾದ್ಯಂತ, 25 ಗ್ರಾಮ ಪಂಚಾಯಿತಿಗಳಲ್ಲಿ, ಇಂದು ಪೂರ್ಣಗೊಳ್ಳಲಿದೆ ಎಂದು, ವಿಜಯನಗರ ಜಿಲ್ಲೆಯ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಇಲಾಖೆ ಅಧಿಕಾರಿ, ಕೆ. ರವಿಕುಮಾರ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.*

<><><>

ವಿವೇಕ (48) + ಕೆ. ರವಿಕುಮಾರ ಧ್ವನಿ (65) ಸೆಕೆಂದುಗಳು

<><><>

**'A New Icon for a Fitter India - Pedaling to 2030" –** ಧ್ಯೇಯದೊಂದಿಗೆ, ಫಿಟ್ ಇಂಡಿಯಾ; ಸಂಡೇಸ್ ಆನ್ ಬೈಸಿಕಲ್, 75ನೇ ಆವೃತ್ತಿಯ ಅಭಿಯಾನ, ಧಾರವಾಡ ಸೇರಿದಂತೆ, ದೇಶದ 8 ಸಾವಿರಕ್ಕೂ ಅಧಿಕ ಸ್ಥಳಗಳಲ್ಲಿ, ಖೇಲೋ ಇಂಡಿಯಾ ಕೇಂದ್ರಗಳು ಹಾಗೂ ಭಾರತೀಯ ಕ್ರೀಡಾ ಪ್ರಾಧಿಕಾರ – ಸಾಯ್ ಕೇಂದ್ರಗಳ ಸಹಯೋಗದಲ್ಲಿ, ಜನ ಜಾಗೃತಿ ಸೈಕ್ಲೋಥಾನ್, ಜರುಗಿತು. ಅಹಮದಾಬಾದ್‌ನ 2030ರ ಕಾಮನ್‌ವೆಲ್ತ್ ಕ್ರೀಡಾಕೂಟದ, ಶತಮಾನೋತ್ಸವ ಸ್ಮರಣಾರ್ಥ, ಫಿಟ್ ಇಂಡಿಯಾ; ಸಂಡೇಸ್ ಆನ್ ಬೈಸಿಕಲ್, ಧಾರವಾಡ ಅಭಿಯಾನದಲ್ಲಿ ಪಾಲ್ಗೊಂಡಿದ್ದ, ಭಾರತೀಯ ಜೀವ ವಿಮಾ ನಿಗಮದ, ನಿವೃತ್ತ ಅಭಿವೃದ್ಧಿ ಅಧಿಕಾರಿ, ಲಕ್ಷ್ಮೀಕಾಂತ ನಾಯಕ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಲಕ್ಷ್ಮೀಕಾಂತ ನಾಯಕ ಧ್ವನಿ 45 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

**"ಮಕ್ಕಳ ಕಣ್ಮರೆ ತಡೆಗಟ್ಟಲು, ಪೋಷಕರ ಮತ್ತು ಸಮುದಾಯ ಆರೈಕೆಯನ್ನು ಬಲಪಡಿಸುವುದು"** ಎಂಬ, ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ, ಇಂದು, ಕಾಣೆಯಾದ ಮಕ್ಕಳ ದಿನವನ್ನು, ಆಚರಿಸಲಾಗುತ್ತಿದೆ. ದೇಶಾದ್ಯಂತ, ಪ್ರತಿ ವರ್ಷ ಕಾಣೆಯಾಗುವ, ಸಾವಿರಾರು ಮಕ್ಕಳ, ಜ್ಞಾಪನಾರ್ಥ, ಈ

ದಿನಾಚರಣೆ. ಮಕ್ಕಳ ಅಪಹರಣದ ಬಗ್ಗೆ ಜನ ಜಾಗೃತಿ, ಚೇತರಿಕೆಯ ಪ್ರಯತ್ನಗಳು, ಪೀಡಿತ ಕುಟುಂಬಗಳಿಗೆ ಬೆಂಬಲ ಸೂಚಿಸಲು, ಜಾಗತಿಕವಾಗಿ, #BlueForHope ಸಂದೇಶದೊಂದಿಗೆ, ನೀಲಿ ಬಣ್ಣ ಧರಿಸಿ ಬೆಂಬಲಿಸಲು, ಕೋರಲಾಗಿದೆ.

<><><>

**"ಶಿಕ್ಷಣದ ಮೂಲಕ ಜಾಗೃತಿ"** ಎಂಬ, ಧ್ಯೇಯದೊಂದಿಗೆ, ಇಂದು ವಿಶ್ವ ಥೈರಾಯ್ಡ್ ಜಾಗೃತಿ ದಿನಾಚರಣೆ. ಥೈರಾಯ್ಡ್ ಗ್ರಂಥಿಯ ಮಹತ್ವ, ಥೈರಾಯ್ಡ್ ಸಂಬಂಧಿ, ಕಾಯಿಲೆಗಳ ಬಗ್ಗೆ, ಜನ ಜಾಗೃತಿ ಮೂಡಿಸುವ, ಗುರಿ ಹೊಂದಿದೆ. ಥೈರಾಯ್ಡ್ ಅಸ್ವಸ್ಥತೆಗಳನ್ನು, ಜಾಗತಿಕವಾಗಿ, ಸಾಮಾನ್ಯ ಆರೋಗ್ಯ ಸಮಸ್ಯೆಗಳಲ್ಲಿ ಒಂದೆಂದು, ಪರಿಗಣಿಸಲಾಗಿದೆ. ಅಯೋಡಿನ್ ಉಪ್ಪು ಸೇವನೆ, ಸೂಕ್ತ ಮತ್ತು ಸಕಾಲಿಕ ಚಿಕಿತ್ಸೆಯಿಂದ, ಥೈರಾಯ್ಡ್ ಅನಾರೋಗ್ಯವನ್ನು ಸರಿ ಪಡಿಸಬಹುದು ಎನ್ನುತ್ತಾರೆ, ಧಾರವಾಡದ ಖ್ಯಾತ ಸ್ತ್ರೀ ಆರೋಗ್ಯ ಹಾಗೂ ಪ್ರಸೂತಿ ತಜ್ಞ, ಡಾಕ್ಟರ್ ಶಿವಾನಂದ ಅಂಗಡಿ.

<><><>

**ಡಾಕ್ಟರ್ ಶಿವಾನಂದ ಅಂಗಡಿ ಧ್ವನಿ 26 ಸೆಕೆಂದುಗಳು**

<><><>

**ಉತ್ತರಕನ್ನಡ ಜಿಲ್ಲೆ,** ಭಟ್ಕಳ ತಾಲೂಕು, ಶಿರಾಲಿಯ ಅಳ್ವೆಕೋಡಿ ಸಮೀಪ, ತಟ್ಟಿಹಕ್ಕಲ ಕಳಿನಟ್ಟಿ ಹೊಳೆಯಲ್ಲಿ, ಕಪ್ಪೆಚಿಪ್ಪು ಹೆಕ್ಕಲು ಹೋದ, 14 ಜನರ ಪೈಕಿ, ಇಬ್ಬರು ಪುರುಷರು ಹಾಗೂ 8 ಜನ ಮಹಿಳೆಯರು ಸೇರಿ, ಹತ್ತು ಜನ ಜಲ ಸಮಾಧಿಯಾಗಿದ್ದಾರೆ. ಓರ್ವರು ನಾಪತ್ತೆಯಾಗಿದ್ದು, ಮೂವರನ್ನು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಲಾಗಿದೆ.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ,** ಎಕ್ಸ್ ಮಾಧ್ಯಮದಲ್ಲಿ, ಸಂತಾಪ ಸೂಚಿಸಿ, ಮೃತಪಟ್ಟವರ ಕುಟುಂಬಗಳಿಗೆ, ತಲಾ 5 ಲಕ್ಷ ರೂಪಾಯಿ ಪರಿಹಾರ ಪ್ರಕಟಿಸಿದ್ದಾರೆ.

<><><>

**ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ** ನಿಧಿಯಿಂದ, ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂಪಾಯಿ, ಗಾಯಗೊಂಡವರಿಗೆ ತಲಾ 50 ಸಾವಿರ ರೂಪಾಯಿ, ನರೇಂದ್ರ ಮೋದಿ ಅವರು ಪ್ರಕಟಿಸಿ, ಸಂತಾಪ ಸೂಚಿಸಿದ್ದಾರೆ.

<><><>

**ಉತ್ತರಕನ್ನಡ ಸಂಸದ ವಿಶ್ವೇಶ್ವರ ಹೆಗಡೆ,** ಕಾಗೇರಿ ಘಟನೆಗೆ ದಿಗ್ಭ್ರಮೆ ವ್ಯಕ್ತ ಪಡಿಸಿ, ಕಂಬನಿ ಮಿಡಿದಿದ್ದಾರೆ.

<><><>

**ಬೆಂಗಳೂರಿನ, ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ,** ವಿಶ್ವ ಆಮೆ ದಿನವನ್ನು, ಅರ್ಥಪೂರ್ಣವಾಗಿ ಆಚರಿಸಲಾಯಿತು. ಭಾರತೀಯ ಅಂಚೆ ಇಲಾಖೆ, ಪೋಸ್ಟ್ ಕ್ರಾಸಿಂಗ್ ವೆಲ್ಫೇರ್ ಸೊಸೈಟಿ ಆಫ್ ಇಂಡಿಯಾ ಹಾಗೂ ಪೋಸ್ಟ್ ಕಾರ್ಡ್ಸ್ ವಿಲ್ಲೆ, ಸಂಸ್ಥೆಗಳ ಸಹಯೋಗದಲ್ಲಿ, ಒಂಬತ್ತು ಶೈಕ್ಷಣಿಕ ಪೋಸ್ಟ್‌ಕಾರ್ಡ್‌ಗಳನ್ನು ಬಿಡುಗಡೆ ಮಾಡಲಾಯಿತು. ಈ ಪೋಸ್ಟ್ ಕಾರ್ಡ್‌ಗಳಲ್ಲಿ ನೆಲದ ಆಮೆಗಳು, ಕಡಲಾಮೆಗಳು, ಸಿಹಿನೀರಿನ ಆಮೆಗಳು ಚಿತ್ರಿತವಾಗಿವೆ. ಬೆಂಗಳೂರಿನ ಉಪ ಮುಖ್ಯ ಪೋಸ್ಟ್ ಮಾಸ್ಟರ್ ದಿನೇಶ ನಾರಾಯಣ, ಜೈವಿಕ ಉದ್ಯಾನದ, ಉಪ ನಿರ್ದೇಶಕಿ ಅನುಷಾ, ಪಶುವೈದ್ಯಕೀಯ ಸೇವೆಗಳ ಉಪ ನಿರ್ದೇಶಕ ಡಾಕ್ಟರ್ ಪ್ರಯಾಗ ಪಾಲ್ಗೊಂಡಿದ್ದರು.

<><><>

**'ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ',** ಧ್ಯೇಯದೊಂದಿಗೆ, ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ, ಗುಂಡು ತೋಪಿನಲ್ಲಿ, 'ರೈತ ಸಂತೆ' ಜರುಗಿತು. ವಿಜಯಪುರದ, ರೈತ ಮಹಿಳೆಯರ, ಮಳ್ಳ ಬದನೆಯ, ನಾಟಿ ತಳಿಗಳು, ನೇರಳೆ ಹಣ್ಣಿನ ಪಾನೀಯ, ಮೇಳದ ವಿಶೇಷ ಆಕರ್ಷಣೆಯಾಗಿದ್ದವು. ಬೆಟ್ಟದ ನೆಲ್ಲಿಕಾಯಿ, ಹಲಸು ಹಾಗೂ ನಾಟಿ ಸೌತೆ, ಗ್ರಾಹಕರನ್ನು ಸೆಳೆದವು. 150ಕ್ಕೂ ಹೆಚ್ಚು ನಗರವಾಸಿಗಳು, ಜಿ.ಕೆ.ವಿ.ಕೆ.ಯ ಹಸಿರು ಪರಿಸರದಲ್ಲಿ 6 ಕಿಲೋ ಮೀಟರ್ ನಡಿಗೆ ಕೈಗೊಂಡರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಬೆಂಗಳೂರು ಕೃಷಿ ವಿಶ್ವವಿದ್ಯಾಲಯ,** ಇಂದಿನಿಂದ 29ರ ವರೆಗೆ, "ಮಕ್ಕಳಿಗೆ ಬಿತ್ತನೆಯಿಂದ ಬೆಳೆಯ ವರೆಗೆ; ಕೃಷಿ ಪಯಣ" ಬೇಸಿಗೆ ಶಿಬಿರ, ಆಯೋಜಿಸಿದೆ. 8 ರಿಂದ, 14 ವರ್ಷದೊಳಗಿನ ಮಕ್ಕಳು, ಭಾಗವಹಿಸಬಹುದು.

<><><>

**ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ** ಹಾಗೂ ಕಾರಂಜಿ ಕೆರೆ ಪ್ರಕೃತಿ ಉದ್ಯಾನ, ನಾಳೆ, ಮಂಗಳವಾರ, ಸಾರ್ವಜನಿಕರ ವೀಕ್ಷಣೆಗೆ, ಲಭ್ಯವಿದೆ.

<><><>

**ಚಾಮರಾಜನಗರ ಜಿಲ್ಲೆ,** ಹನೂರು ತಾಲೂಕು, ಇಂಡಿಗನತ್ತ ಬಳಿ, ಮತ್ತೊಂದು ಚಿರತೆ ಗೋಚರಿಸಿದೆ. ಅರಣ್ಯ ಇಲಾಖೆ, ಬೋನಿರಿಸಿ, ಕಾರ್ಯಾಚರಣೆ ಆರಂಭಿಸಿದೆ.

<><><>

**ಧಾರವಾಡದ, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ** – ವಾಲ್ಮಿ, ಅಧೀಕ್ಷಕ ಅಭಿಯಂತರ, ಬಿ.ವೈ. ಬಂಡಿಒಡ್ಡರ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಇಂದು ಸಂಜೆ 6 ಗಂಟೆಗೆ, ನೀರಿನ ಮಹತ್ವ ಕುರಿತು, ಉಪನ್ಯಾಸ ನೀಡುವರು.

<><><>

**ಕೋಲಾರ ಜಿಲ್ಲೆಯಲ್ಲಿ, ಕುಡಿಯುವ ನೀರಿನ ಅಭಾವ ನೀಗಿಸಲು,** ನೀರಿನ ಅದಾಲತ್ ಆಯೋಜಿಸಲಾಗಿತ್ತು. ಜಿಲ್ಲಾಧಿಕಾರಿ ಡಾಕ್ಟರ್ ಎಂ.ಆರ್.ರವಿ, ಸೈಕಲ್ ಮೂಲಕ ತೆರಳಿ, ಸಾರ್ವಜನಿಕರೊಂದಿಗೆ ಸಮಾಲೋಚಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **‘ಧರ್ತಿ ಆಬಾ, ಜನ್ ಜಾತೀಯ ಗ್ರಾಮ ಉತ್ಕರ್ಷ ಅಭಿಯಾನ’;** ಪರಿಶಿಷ್ಟ ಸಮುದಾಯಗಳ, ಶ್ರೇಯೋಭಿವೃದ್ಧಿ ಆಂದೋಲನ, ಇಂದು ಸಮಾರೋಪ.
- **ಫಿಟ್ ಇಂಡಿಯಾ; ಸಂಡೇಸ್ ಆನ್ ಬೈಸಿಕಲ್ –** ಧಾರವಾಡದಲ್ಲಿ, 75ನೇ ಆವೃತ್ತಿಯ ಸೈಕ್ಲೋಥಾನ್.
- **ಇಂದು, ಅಂತಾರಾಷ್ಟ್ರೀಯ, ಕಾಣೆಯಾದ** ಮಕ್ಕಳ, ಜ್ಞಾಪಕಾರ್ಥ ದಿನ.
- **ವಿಶ್ವ ಥೈರಾಯ್ಡ್ ಜಾಗೃತಿ,** ದಿನಾಚರಣೆ ಇಂದು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>